## ನವಿಲುಗನ್ನಡಿ

ಆಕರ್ಷಕ ಮುಖಪುಟದ ಮೇ, 2017ರ ಸಂಚಿಕೆ ಮನಸೆಳೆಯಿತು. ಎಲ್ಲ ಬರಹಗಳು ಉತ್ತಮವಾಗಿದ್ದವು. ಪಿ.ಪಿ. ಉಪಾಧ್ಯ ಅವರ ಕತೆ 'ರಾಧೆ' ಇಷ್ಟವಾಯಿತು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಕೊಂಕಣಿ ಲೇಖಕ ಮಹಾಬಳೇಶ್ವರ ಸೈಲ್ ಸಂದರ್ಶನದಲ್ಲಿ ಸಾಹಿತ್ಯ – ಬದುಕಿನ ಬಗ್ಗೆ ಅವರಿಗಿರುವ ಬದ್ಧತೆ, ನಿಲುವು ವ್ಯಕ್ತವಾಗಿದೆ. ಸಂದರ್ಶಕಿ ಗೀತಾ ಶೆಣೈ ಅವರು ಲೇಖಕರ ಒಳಮಾತುಗಳನ್ನು ಹೊರತರುವಲ್ಲಿ ಸಫಲರಾಗಿದ್ದಾರೆ.

**ಸುರೇಶ ಕೆ.ವಿ., ಶಿವಮೊಗ್ಗ**

'ನನ್ನ ಕಥಾಪ್ರಸಂಗ'ದ ಲೇಖನದಲ್ಲಿ ಬೊಳುವಾರು ಮಹಮದ್ ಕುಂಞ್ ಅವರ ಮನುಷ್ಯಪರವಾದ ಕಳಕಳಿ, ಕಾಳಜಿಗಳು ವ್ಯಕ್ತವಾಗಿವೆ. ಅದು ನಾಡಿನ ಪ್ರತಿಯೊಬ್ಬರ ಮನದಲ್ಲಿ ಪಸರಿಸುವಂತಾದರೆ ಒಳಿತು.

**ಮೋಹನಕುಮಾರ್, ಧಾರವಾಡ**

ಮನದುಂಬುವಂತೆ ರಸಿಕರಿಗೆ ಹಿಂದೂಸ್ತಾನಿ ಸಂಗೀತವನ್ನು ಉಣಬಡಿಸಿದ ಅಪೂರ್ವ ಗಾಯಕಿ ಕಿಶೋರಿ ಅಮೋಣ್ಕರ್. ಅವರ ರಾಗಯಾನದ ಸುಂದರ ಚಿತ್ರಣ ಟಿ.ಎಸ್. ವೇಣುಗೋಪಾಲ್, ಶೈಲಜಾ ಅವರ ಲೇಖನ 'ನಾದತಪಸ್ವಿನಲ್ಲಿ ಕಿಶೋರಿತಾಯಿ'ಯಲ್ಲಿ ಮೂಡಿದೆ.

**ಎಚ್. ಆನಂದ್‌ಕುಮಾರ್, ಚಿತ್ರದುರ್ಗ**

ಬಿ.ಎಲ್. ವೇಣು ಅವರ ಕತೆ 'ಇಳಿಜಾರು' ಕಂಪೆನಿಗಳಲ್ಲಿ ನಡೆಯುವ ಲೈಂಗಿಕ ಸ್ವಾತಂತ್ರ್ಯ, ಸ್ವಚ್ಛಂದತೆ, ಆಧುನಿಕ ಕಾಲದಲ್ಲಿ ನಮ್ಮ ಬದುಕು ಜಾರುತ್ತಿರುವುದನ್ನು ಅರ್ಥಪೂರ್ಣವಾಗಿ ಚಿತ್ರಿಸಿದೆ.

**ಕೊಹಿಮ, ಬಸರಕೋಡು**




ಎಸ್.ಜಿ. ಶಿವಶಂಕರ ಅವರ 'ಪ್ರಯಾಣ' ಕತೆಯನ್ನು ಓದುತ್ತಿದ್ದಂತೆ ನನಗೆ ಯಶವಂತ ಚಿತ್ತಾಲರ 'ಪಯಣ' ಕತೆ ಸ್ಮರಣೆಯಲ್ಲಿ ಸುಳಿಯಿತು. ವಸುಮತಿ ಉಡುಪ ಅವರ ಲಲಿತ ಪ್ರಬಂಧ 'ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ' ಮನಕೆ ಮುದ ನೀಡಿತು.

**ಮೊಹರು, ಇಲಕಲ್ಲ**

ಪ್ರೇಮಾ ಭಟ್ ಅವರ ಕತೆ 'ಅವಳೆಂದೂ ಅಳಲಿಲ್ಲ' ಹೆಣ್ಣಿನ ಸಹನಶೀಲತೆಗೆ ಒಂದು ಉತ್ತಮ ಉದಾಹರಣೆ.

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**

ತೇಜಶ್ರೀ ಅವರ ದಕ್ಷಿಣ ಆಫ್ರಿಕಾದ ಕವಯಿತ್ರಿ ಇನ್‌ಗ್ರಿಡ್ ಯಾಂಕರ್ ಕುರಿತ ಬರಹ ಬಹಳ ಇಷ್ಟವಾಯಿತು. ಇನ್‌ಗ್ರಿಡ್ ತರಹದವರು ಕನ್ನಡದಲ್ಲೂ ಬರುವಂತಾದರೆ ಎಷ್ಟು ಚೆನ್ನ!

**ಸುಮಂಗಲಾ ಎಸ್.ಪಿ., ಕೋಲಾರ**

ಎಫ್. ಸ್ಕಾಟ್ ಫಿಟ್ಸ್ ಜೆರಾಲ್ಡ್ ಅವರ ಕತೆ 'ವಿಮಾನಯಾನದ ಮೂರು ಗಂಟೆಗಳ ಮಧ್ಯಂತರ' (ಕನ್ನಡಕ್ಕೆ: ಕೆ. ಪದ್ಮಾಕ್ಷಿ) ಚೆನ್ನಾಗಿತ್ತು. ಈ ಕತೆ ಕನ್ನಡತನವನ್ನು ಇನ್ನಷ್ಟು ಮೈಗೂಡಿಸಿಕೊಳ್ಳಬಹುದಿತ್ತು.

**ಸುಜಾತಾ ವಸಂತ್, ಬೆಂಗಳೂರು**